CONQUER
GENERAL
SEXUAL
DEBILITIES
WITH
SHAKTI
SUDHA

ವಾರದ ಸಂಚಿಕೆ

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದ್ದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 27 ಸಂಚಿಕೆ 241] ಶುಕ್ರ, ಶನಿವಾರ 9, 10—6—44 [ಕಾಲಾಣಿ

TALK-A-TONE

Monthly Magazine
For Cine News & Views

Advertise
for better Business

Single copy 0-12-0

Enquire— D. Mahaadev
C/o Opera Talkies
Mysore

ಸಂಸ್ಥಾನದ ಸುದ್ದಿಗಳು

ಮೈಸೂರು ನಗರದಲ್ಲಿ 1-8-44 ರಿಂದ ಹೊಸ ರೇಷನಿಂಗ್ ಕಾರ್ಡು ಜಾರಿಗೆ ಬರುವುದು ಈಗ ರೇಷನಿಂಗ್ ತೆಗೆದುಕೊಳ್ಳುವ ಕಡೆಗಳಲ್ಲಿ ಒಂದು ಭಾಗದಲ್ಲಿ ತಮ್ಮ ಮನೆಯಲ್ಲಿ ವಾಸಿಸುತ್ತಿರುವವರ ಹೆಸರು ಬರೆದುಕೊಟ್ಟು ನಂತರ ನೂತನ ರೇಷನಿಂಗ್ ಕಾರ್ಡು ಪಡೆಯಲ್ಲು ಅನುಕೂಲಮಾಡಿಸುತ್ತಾರೆ.

11—11—43 ರಲ್ಲಿ ರಹದಾರಿಗೆ ರಾಜಧಾನಿಯ ವರ್ತಕರು ಒಳಿ ಮಾರಲು ರಹದಾರಿ ಕೊಡಬೇಕೆಂದು ಅರ್ಜಿ ಹಾಕಿದ್ದರು. ಇದುವರೆಗೂ ರಹದಾರಿ ಬಂದಿಲ್ಲವಂತೆ !

ಮೈಸೂರು ನ್ಯಾಯವಿಧಾಯಕ ಸಭೆಯು ಇದೇ 19 ರಿಂದ ಬೆಂಗಳೂರು ಕೌನ್ಸಿಲ್ ಹಾಲಿನಲ್ಲಿ ಸೇರಿ, ಜೂಲೈ 4 ರವರೆಗೂ ನಡೆಯುವದೆಂದು ತಿಳಿಯಬಂದಿದೆ.

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ಭಾರತೀಯ ಸೈನಿಕರ ಕ್ಯಾಂಟೀನ್ ಕಟ್ಟಡದ ಅಸ್ತಿಭಾರ ಶಿಲೆಯನ್ನು ಶ್ರೀಮನ್ಮಹಾರಾಜರವರು 19 ನೇ ತಾರೀಖಿನ ದಿವಸ ಸ್ಥಾಪಿಸುವರಾಗಿರುವರು.

ಮೈಸೂರು ಹಿಂದೀಪ್ರಚಾರ ಸಭೆಯವರ ಬೇಸಿಗೆ ಶಿಬಿರದ ಮುಕ್ತಾಯ ಮತ್ತು ಬಹುಮಾನ ಹಂಚುವ ಉತ್ಸವವು 11 ನೇ ತಾರೀಖು ಸಾಯಂಕಾಲ 6—30 ಕ್ಕೆ ಒನಮಯ್ಯಾ ಹೈಸ್ಕೂಲಿನಲ್ಲಿ ಶ್ರೀ ಎಂ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ರೋಂ ನಗರವನ್ನು ಉದ್ಧಾರ ಮಾಡಿದ್ದಕ್ಕಾಗಿ ಪೋಪರು ವಿಶ್ರಾಂತಿನ್ನು ವಂದಿಸಿರುತ್ತಾರೆ, ಅಲ್ಲದೆ ಆಹಾರ ಒದಗಿಸುತ್ತಿರುವುದಕ್ಕೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುತ್ತಾರೆ.

ಮಿತ್ರರ ಮುಖ್ಯ ಸೈನ್ಯಾಧಿಕಾರಿ ಐಸೆಹೋವರವರು ಫ್ರಾನ್ಸಿನವರನ್ನು ನಾಜಿ ಕಿರುಕುಳದಿಂದ ಬಿಡುಗಡೆ ಮಾಡಲು ತಾವು ಒಂದಿರುವುದಾಗಿ ಹಸ್ತಪತ್ರಿಕೆ ಹೊರಡಿಸಿ ಅದನ್ನು ವಿಮಾನಗಳಿಂದ ಫ್ರಾನ್ಸಿನ ನಾನಾ ಭಾಗದಲ್ಲಿ ಜೆಲ್ಲಿರುವರು.

ಪ್ರಜಾಪ್ರತಿನಿಧಿಸಭೆ.

[ಸ್ವಂ ಸು] ಬೆಂಗಳೂರು. ಜೂ 9

ಆಹಾರ ಸಲಹಾರಾಯರು ಇಲಾಖೆಗೆ 10 ಮಂದಿಯನ್ನು, ಪ್ರ. ಪ್ರ. ಸಭೆಯಿಂದ 5 ನ್ಯಾ. ವಿ. ಸಭೆಯಿಂದ 5 ಮಂದಿಯನ್ನು ಆರಿಸುವ ಹಕ್ಕನ್ನು ಕೊಡಬೇಕೆಂದು ಕಾಂಗ್ರೆಸ್ಸಿನವರು ಅರಿಕೆಮಾಡಿಕೊಂಡರು. ಇದಕ್ಕೆ ಸರಕಾರದವರು ರೈತರನ್ನು ಸಂಬಿ ನಾವು ದೊಡ್ಡವರು ಮಕ್ಕಳು ಆದಿಯಾಗಿ ತಲಾ ಅರ್ಧ ಸೇರು ದವಸ ಕೊಟ್ಟೆವು. ಈ ಸಂಬಿಕೆ ಅವರು ಉಳಿಸಿಕೊಳ್ಳಲಿಲ್ಲ. ನಮ್ಮ ನೌಕರರಲ್ಲಿ ಎಲ್ಲರೂ ಸತ್ಯವಂತರೆಂದು ನಾವು ಹೇಳುವುದಿಲ್ಲ. ಮಹಾಜನರ ಸಹಕಾರ ಸಮುಗೆ ಬೇಕು. ಏಳೂಕಾಲು ಲಕ್ಷ ರೈತರ ಕುಟುಂಬದವರಿಗೆ ಈಗ ದಾವು ದವಸ ಕೊಟ್ಟಿರುತ್ತೇವೆಂದು ಉತ್ತರ ಬಂತು.

ಪ್ರ. ಸ.-ಸಭೆಗೆ ಖಾಸಗಿ ಅಧ್ಯಕ್ಷರನ್ನು ಇನ್ನೂ ಕೊಡದ ನಿಮಿತ್ಯ ಶ್ರೀ ಚಂಗಲರಾಯ ರೆಡ್ಡಿಯವರು ರಾಜೀನಾಮೆ ಕೊಡುವರೆಂದು ಹೇಳಲಾಗಿದೆ.

ಸಭೆಯನ್ನು ಇನ್ನೂ ಎರಡು ದಿವಸ ಹೆಚ್ಚಿಸಬೇಕೆಂದು ಕೆಲವು ಪ್ರತಿನಿಧಿಗಳು ಅರಿಕೆ ಮಾಡಿ ಕೊಂಡರು.

ಜರ್ಮನರ ಉಗ್ರ ಪ್ರತಿಭಟನೆ

ಚರಬರ್ಗಿನ ಪೂರ್ವದಲ್ಲಿ ಮಿತ್ರರನ್ನು ಉಗ್ರವಾಗಿ ಎದುರಿಸುವ ಕಾರ್ಯಕ್ರಮವನ್ನು ಜರ್ಮನರು ಕೈಕೊಂಡಿರುವರೆಂದು ಜರ್ಮನ್ ಓವರ್‌ಸೀಸ್ ನ್ಯೂಸ್ ಏಜೆನ್ಸಿ ಹೇಳಿಕೆ.

ಬಿಯುರೆಟ್ಸೆ ಮತ್ತು ಹ್ಯಾಂಬರ್ಗಿನ ಮಧ್ಯೆ ಜರ್ಮನಿ ಮೇಲೆ ಮಿತ್ರರ ಮುಖ್ಯ ಏಟು ಬೀಳಬಹುದೆಂದು ಹೇಳಲಾಗಿದೆ.

ಯೂರೋಪು— ಜರ್ಮನರು ಮಿತ್ರರನ್ನು ಬಹು ಭಯಂಕರವಾಗಿ ಎದುರಿಸುತ್ತಿರುವರು- ಎಷ್ಟಾದರೂ ಮಿತ್ರರನ್ನು ತಡೆಗಟ್ಟಲು ಜರ್ಮನರ ಕೈಲಾಗುವುದೇ ? ಬ್ರಿಟಿಷ್ 6 ನೇ ವಿಮಾನದಳವು ತನ್ನ ಸ್ಥಳವನ್ನು ಒಲಪಡಿಸಿಕೊಂಡು ಕಲ್ಲಿನಂತೆ ನಿಂತಿದೆ, ಅಮೇರಿಕಾದವರ ಸೇನೆ ತನ್ನ ಸೇನೆಯು ತನ್ನ ಸ್ಥಾನವನ್ನು ಒಲಪಡಿಸಿಕೊಂಡು ಮುಂದೆ ನುಗ್ಗುತ್ತಿವೆ. ಜರ್ಮನರ 16 ಡಿವಿಜನ್ ಸೇನೆಯನ್ನು ಈ ರಂಗದಲ್ಲಿ ಬಿಟ್ಟಿರುವಂತೆ ತಿಳಿಯಬಂದಿದೆ. ಶತ್ರುಗಳ ಪೈಗಳು ಗಂಟೆಗಂಟೆಗೂ ಹೆಚ್ಚುತ್ತಿದ್ದಾರೆ. ನಮ್ಮ ಒಂದು ಡಿವಿಜನ್ನಿನವರೇ 1000 ಶತ್ರುಗಳನ್ನು ಹಿಡಿದಿರುವರು. ನಮ್ಮ ವರ್ತಕ ನೌಕೆಗಳು ಸರಾಗವಾಗಿ ಸಾಮಾನುಗಳನ್ನು ನಮ್ಮ ಸೈನಿಕರಿಗೆ ಒದಗಿಸುತ್ತಿವೆ. ಮಿತ್ರರು ವಿಮಾನಧಾಳಿ ಕಮ್ಮಿ ಮಾಡಿಲ್ಲ. ಮಿತ್ರರ ವಿಮಾನ ಧಾಳಿ ಮಂಗಳವಾರದಿಂದ ನಿನ್ನೆಯವರೆಗೆ ಅಂದರೆ 52 ಗಂಟೆಗಳಲ್ಲಿ 27 ಸಾವಿರ ನಾನಾ ಬಗೆಯ ವಿಮಾನಗಳನ್ನು ಉಪಯೋಗಿಸಿ (ಅಂದರೆ 1 ನಿಮಿಷಕ್ಕೆ 9 ವಿಮಾನದಂತೆ) ಶತ್ರುಗಳ 176 ವಿಮಾನಗಳನ್ನು ನೆಲಕ್ಕೆ ಕೆಡವಿದರು. ನಮ್ಮ ವಿಮಾನ 249 ನಷ್ಟವಾಗಿದೆ ಅಂದರೆ ಶೇಕಡ 19 ರಂತೆ ಆಯಿತರ.

ಇಟಲಿ—ಇಟಲಿಯಲ್ಲಿ ಮಿತ್ರರು ರೋಂಗೆ ಉತ್ತರದಲ್ಲಿ 40 ಮೈಲಿ ದೂರದಲ್ಲಿರುವ ಚಿವಿಟ್ ಬೆಕಿಯನ್ನು ಹಾದು ಚಿವಿಟ್ ಕ್ಯಾಸ್ಟ್ಯಾರ್ಡನ್ನು ಹಿಡಿದರು, 8 ನೇ ದಳವು ಸುಬಿಯಾಟಿ ನಗರವನ್ನು ಸ್ವಾಧೀನಪಡಿಸಿಕೊಂಡಿದೆ. ಇದು ರೋಂಗೆ 30 ಮೈಲಿಯಲ್ಲಿದೆ. ಮಾರ್ಷಲ್ ಬಡೋಲಿಯು ಇನ್ನು ಹೊಸ ಸರ್ಕಾರ ನಿರ್ಮಿಸಲು ಆಗದಾಗಿದೆ, ಸಿನಿಯೂರ್ ಬನಾಮಿಯು ಹೊಸಸರ್ಕಾರ ರಚಿಸುವಂತಿದೆ.

ಬರ್ಮಾ—ಮಿತ್ರ ಸೇನೆಯು ವಿಂಚಿನ್ ವಿಮಾನ ನಿಲ್ದಾಣವನ್ನು ಆಕ್ರಮಿಸಿದರು ಚೀನಿ ಸೇನೆಗಳು ದಕ್ಷಿಣ ಪಶ್ಚಿಮ ಭಾಗಗಳಿಂದ ನಗರವನ್ನು ಪ್ರವೇಶ ಮಾಡಿದರು. ಇಂಡಿಯ ಬರ್ಮಾ ಗಡಿಯಲ್ಲಿ ಜಪಾನಿಯರು ಹಿಮ್ಮೆಟ್ಟಿರುವರು. ಅದು ಕೊಹಿಮಾ ಬಳಿ ಇನ್ನೂ ಹೆಚ್ಚಾಗಿ,

ಶಾಂತಿಸಾಗರ—ಅಮೆರಿಕನರು ಮಾಕ್ಯಾ ನಿಲ್ದಾಣ ಗೆದ್ದು ಪೂರ್ವದಿಕ್ಕಿನ ಕಡೆ ನುಗ್ಗುತ್ತಿರುವರು.

ಇಟಲಿ—ಹೆಚ್ಚಿನ ಸಂಗತಿ ಬಂದಿಲ್ಲ,

ಪ್ರಜಾಪ್ರತಿನಿಧಿ ಸಭೆ

(ಸ್ವಂ. ಸು.) ಬೆಂಗಳೂರು ಜೂನ್ 7

ಪ್ರ. ಪ್ರ. ಸಭೆಯ ಸದಸ್ಯರಾದ ಶ್ರೀ ಪುಂಜಿ ಚಿಕ್ಕಣ್ಣನವರು ನಿಧನರಾದ ಪ್ರಯುಕ್ತ ಸಂತಾಪವನ್ನು ಸಭೆಯಲ್ಲಿ ಸೂಚಿಸಿದರು.

ವಿದ್ಯಾಭ್ಯಾಸದ ಮತ್ತು ವಿಜ್ಞಾನಿಕ ಶಾಸ್ತ್ರದ ವಿದ್ಯಾಭ್ಯಾಸಕ್ಕೆ 10 ಲಕ್ಷ ರೂಪಾಯಿ ಒದಗಿಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಪೊಗದಿ ವಜಾ. ದವಸಕೊಳ್ಳಲು, ಬಟ್ಟೆಕೊಳ್ಳಲು ಸರ್ಕಾರದ ಹಣದಿಂದ ಲಾಭ ಬಂತೇ, ನಷ್ಟವಾಯಿತೇ, ವಿದ್ಯುಚ್ಚಕ್ತಿ ಕಾರ್ಯಾಲಯದಲ್ಲಿ ಆಗಿರುವ ನಷ್ಟ, ಈ ವಿಷಯಗಳನ್ನು ಚರ್ಚಿಸಲು ದಿವಾನರು ಅನುಮತಿ ಕೊಡಲಿಲ್ಲ.

ಮುಖ್ಯ ಉದ್ದೇಶ ಮಿತವ್ಯಯ, ಅಷ್ಟೇ. ನ್ಯೂಸ್‌ಪ್ರಿಂಟು ಇದಕ್ಕೆ ಅನ್ವಯಿಸುವುದಿಲ್ಲ. ಕಾಗದ ಅವಶ್ಯಕವಾದುದಕ್ಕೆ ಸಿಕ್ಕುತ್ತಿಲ್ಲವೆಂದೇ ಕಾನೂನು ತರಲಾಗಿದೆಯೆಂದು ಕಾಗದ ವಿನಿಯೋಗದ ಆಜ್ಞೆಯ ವಿಷಯದ ಮೇಲೆ ಸರಕಾರದ ಉತ್ತರ ಬಂದಿತು.

ಇನ್ನು ಮುಂದೆ ರೈತರಿಂದ ಭತ್ತವನ್ನು ಅಳೆದುಕೊಳ್ಳುವಾಗ ಕೊಳಗದ ಬದಲು ಸೇರಿನಲ್ಲೇ ಅಳತೆ ಮಾಡಿಸಿಕೊಳ್ಳುವಂತೆ ತೀರ್ಮಾನವಾಯಿತು.

ಲೋಕಲ್

ಜೂನ್ 8

2479 ಜನರನ್ನು ರಾಜಕೀಯ ಕಾರಣಕ್ಕಾಗಿ ದಸ್ತಗಿರಿಯಾದರು. ಇವರಲ್ಲಿ 1479 ಡೆಟನೂಗಳು ; 998 ಮಂದಿಯನ್ನು ಹಿಡಿದವು. 722 ರ ಮೇಲೆ ಕೋರ್ಟಿನಲ್ಲಿ ವಿಚಾರಣೆ ನಡೆಸಿದೆ. ಹಾಸನದಲ್ಲಿ 213, ಕಡೂರಿನಲ್ಲಿ 21 ತುಮಕೂರಿನಲ್ಲಿ 42 ಮಂದಿಗಳ ವಿಚಾರಣೆಯಾಯಿತು. ಫೆಡರಲ್ ಕೋರ್ಟು ಕೊಟ್ಟ ತೀರ್ಪು ಇಲ್ಲಿ ಏಳುವುದಿಲ್ಲವೆಂದು ಶ್ರೀ ಮುತ್ತಣ್ಣನವರ ಪ್ರಶ್ನೆಗೆ ಸರ್ಕಾರದ ಉತ್ತರ ಬಂದಿತು.

ಮಲೇರಿಯಾ ಮೊದಲು ಶಿವಮೊಗ್ಗ ಹಾಸನ ಕಡೂರು ಜಿಲ್ಲೆಗಳಲ್ಲಿ ಇತ್ತು. ಈಗ ಮಂಡ್ಯ ಮೈಸೂರು ಜಿಲ್ಲೆಗಳಲ್ಲಿವೆ. ಅಲ್ಲದೆ ಕೃಷ್ಣರಾಜ ಸಾಗರ ವಾಣಿವಿಲಾಸ ಜಲಾಶಯಗಳಲ್ಲೂ ಇದೆ. 1941 ರಲ್ಲಿ 2100 ಜನರು ಸತ್ತರು. ಮಂಡ್ಯಕ್ಕೆ 160866 ರೂ. ಒದಗಿಸಿದೆ. 8 ಲಕ್ಷ ರೂ. ಯೋಜನೆಯಲ್ಲಿ ಈಗಾಗಲೇ 6 ಲಕ್ಷ ವೆಚ್ಚಮಾಡಿದೆ. ಹೆಗ್ಗಡದೇವನ ಕೋಟೆ ಸಾಗರ ಅನಂತಪುರ ಮಾರ್ಕೋನಹಳ್ಳಿ ಕಣ್ವ ವಾಣೀವಿಲಾಸ ಜಲಾಶಯಗಳಲ್ಲಿ ಆರೋಗ್ಯ ಕೇಂದ್ರ ತೆಗೆಯಲು ಯೋಚಿಸಿದ್ದೇವೆ, ಎಂದು ಸರ್ಕಾರದವರು ಒಬ್ಬ ಸದಸ್ಯರ ಪ್ರಶ್ನೆಗೆ ಉತ್ತರವಿತ್ತರು.

ಶ್ರೀ ಬಿ. ನಾರಾಯಣಸ್ವಾಮಿ, ಶ್ರೀ ಚಂಗಲರಾಯ ರೆಡ್ಡಿ ಇವರನ್ನು ಪ್ರ. ಪ್ರ ಸಭೆಯಿಂದ ಮೈಸೂರು ಸರಕಾರದ ಕೇಂದ್ರ ಆರೋಗ್ಯಬೋರ್ಡಿಗೆ ಚುನಾಯಿಸಲಾಯಿತು.

ಶ್ರೀ ಕೃಷ್ಣಮೂರ್ತಾಚಾರ್ಯರು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಲು ಎರಡು ಲಕ್ಷ ರೂ. ಒಗಗಿಸಬೇಕೆಂದರು.

ಶ್ರೀ ಬಳೇ ಸಿದ್ಧಲಿಂಗಶೆಟ್ಟರು ಮೈಸೂರಿನವರಿಗೇ ಮೈಸ್ಥಾನ್ಸಲರ್ ಪದವಿ ಕೊಡಬೇಕು, ಇನ್ನು ಮುಂದೆ ಪ್ರ. ಪ್ರ. ಸಭೆಯು ಮೈಸೂರಿನಲ್ಲೇ ನಡೆಯಬೇಕು ಎಂದು ಅರಿಕೆ ಮಾಡಿಕೊಂಡರು.

ಅನಾಗರೀಕವಾದ ಅಂಡಮಾನ್‌ನಲ್ಲಿ ಶೇಕಡ 20 ರಂತೆ ವಿದ್ಯಾವಂತರಿರುತ್ತಾರೆ ಮೈಸೂರಿನಲ್ಲಿ ಶೇಕಡ 13 ಮಂದಿ ಮಾತ್ರ. ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ ದ್ರವ್ಯ ಕೊಡಬೇಕು ಎಂದು ತ್ರೀ ಕರಿಯಪ್ಪನವರು ಕೇಳಿಕೊಂಡರು.

ರೈತನ ಹೊರೆ ಕಮ್ಮಿಮಾಡಲು ಕಂದಾಯ ಕಡಮೆಮಾಡಬೇಕೆಂದು ಶ್ರೀ ನವರತ್ನರಾಮರಾಯರು ಅರಿಕೆ ಮಾಡಿಕೊಂಡರು.

ಜನಪ್ರಿಯವಾದ ಸರಕಾರ ಸ್ಥಾಪನೆ ಮಾಡಬೇಕೆಂದು ಶ್ರೀ ಚಂಗಲರಾಯ ರೆಡ್ಡಿಯವರು ಭಾಷಣಮಾಡಿದರು.

ವ್ರ. ಪ್ರ. ಸಭೆಗೆ ಖಾಸಗೀ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವುದಕ್ಕೆ ಅಪ್ಪಣೆ ಕೊಡಬೇಕೆಂದು ಮಹಾರ್ವಾಪು ಯವರನ್ನು ಬೇಡಿಕೊಳ್ಳಲು ಎಲ್ಲಾ ಪಾರ್ಟಿಯವರೂ ಆಲೋಚಿಸುತ್ತಿರುವರು.

5 ನೇ ವಾರ OPERA

Chenchulakshmi

(Telugu)

— with —

Naqiah. Kamala Kotnis

Narayana Rao

ಚಂಚುಲಕೆ

ಅಮೋಘ ತೆಲಗು ಚಿತ್ರ———

ಪ್ರತಿ ದಿವಸ 2 ಆಟಗಳು— 7 ಗಂಟೆಗೆ ಮತ್ತು 10 ಗಂಟೆಗೆ

ಶನಿವಾರ, ಭಾನುವಾರ ಮ್ಯಾಟಿನಿ 4 ಗಂಟೆಗೆ

Next Change 'Golden Rush'

with Charlie Chaplin

12 th Triumphant Week

ನೇ ಅಮೋಘ ವಾರ

Ranjit Talkies — ರಣಜಿತ್

TANSEN ತಾನ್‌ಸೆನ್

ಪ್ರತಿ ದಿನ 2 ಆಟಗಳು ಮಾತ್ರ— ಮ್ಯಾಟಿನಿ 4 ಗಂಟೆಗೆ, ರಾತ್ರಿ ಆಟ 10-15 ಕ್ಕೆ

ಶನಿವಾರ ಭಾನುವಾರಗಳಲ್ಲಿ ಎಂದಿನಂತೆ ಜೆಳಿಗ್ಗೆ ಪ್ರದರ್ಶನ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಅಶ್ವಿ ಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಫಾರ್ಮಸಿ ಗಂಟಿ, ಚಾಮರಾಜಪುರಂ ಮೈಸೂರು.

ವಿವಿಧ ಬಟ್ಟೆಗಳು

ಅಂದವಾದ ಹೊಲಿಗೆ

ರೆಡಿ ಮೇಡ್ ಡ್ರೆಸ್

ಇವುಗಳಿಗೆ ನಮ್ಮಲ್ಲಿ ಬನ್ನಿ

ಮಹಾಲಕ್ಷ್ಮಿ ಹಾಲ್

ಸಯ್ಯಾಜಿ ರಾವ್ ರೋಡ್, ಮೈಸೂರು

Edited Printed and published by M. S. Krishna Rao at the Satyavadi Press, Chamara Agrahar Mysore